# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಡಾ: ಉಮಾಶ್ರೀ (ನಾಮನಿರ್ದೇಶಿತರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 825**

**ಉತ್ತರಿಸಬೇಕಾದ ದಿನಾಂಕ : 15-12-2025**

**ಉತ್ತರಿಸಬೇಕಾದ ಸಚಿವರು : ಸನ್ಮಾನ್ಯ ಮುಖ್ಯಮಂತ್ರಿಗಳು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ನಂದಿನಿ ಬ್ರ್ಯಾಂಡ್ ಅನ್ನು ಉಪಯೋಗಿಸಿಕೊಂಡು ಕಲಬೆರಕೆ ತುಪ್ಪ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದುವರೆಗೂ ಎಷ್ಟು ಪ್ರಕರಣಗಳು ದಾಖಲಾಗಿವೆ; ಈ ರೀತಿ ಸರಬರಾಜು ಮಾಡಿರುವ ಸಂಸ್ಥೆ ಹಾಗೂ ಅಂಗಡಿಗಳ ಮೇಲೆ ಎಫ್.ಐ.ಆರ್. ದಾಖಲು ಮಾಡಲಾಗಿದೆಯೇ ಹಾಗೂ ಇದರ ಲೈಸನ್ಸ್ ಗಳನ್ನು ರದ್ದು ಮಾಡಲಾಗಿದೆಯೇ (ವಿವರ ನೀಡುವುದು): | ಹೌದು. ರಾಜ್ಯದಲ್ಲಿ ನಂದಿನಿ ಬ್ರ್ಯಾಂಡ್ ಅನ್ನು ಉಪಯೋಗಿಸಿಕೊಂಡು ಕಲಬೆರಕೆ ತುಪ್ಪ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಈ ಬಗ್ಗೆ ಇದುವರೆಗೂ 7 ಪ್ರಕರಣಗಳು ಕಂಡುಬಂದಿದ್ದು, 5 ಪ್ರಕರಣಗಳ ವಿರುದ್ಧ ಕರ್ನಾಟಕ ಹಾಲು ಮಹಾಮಂಡಳವು ಪೊಲೀಸ್ ಠಾಣೆಯಲ್ಲಿ ಎಫ್. ಐ. ಆರ್ ದಾಖಲಿಸಿದ್ದು, ಅವುಗಳು ವಿಚಾರಣಾ ಹಂತದಲ್ಲಿರುತ್ತದೆ. ಬಾಕಿ ಉಳಿದ 2 ಪ್ರಕರಣಗಳು ಸುಳ್ಳು ಪ್ರಕರಣವೆಂದು ಬಿ ರಿಪೋರ್ಟ್ ಆಗಿರುತ್ತದೆ. ವಿವರಗಳನ್ನು ಪ್ರತ್ಯೇಕವಾಗಿ ಅನುಬಂಧದಲ್ಲಿ ಲಗತ್ತಿಸಿದೆ.<br><br>ಶ್ರೀ ಕೃಷ್ಣ ಎಂಟರ್ ಪ್ರೈಸಸ್ ರವರ ವಿರುದ್ಧದ ಪ್ರಕರಣವು ಸಿಸಿಬಿ ಪೊಲೀಸ್ ರವರಿಂದ ತನಿಖಾ ಹಂತದಲ್ಲಿರುತ್ತದೆ ಹಾಗೂ ಕರ್ನಾಟಕ ಹಾಲು ಮಹಾಮಂಡಳವು ಸದರಿಯವರ ಅಧಿಕೃತ ಸಗಟು ಮಾರಾಟಗಾರಿಕೆಯ ಪರವಾನಗಿಯನ್ನು ದಿನಾಂಕ:14-11-2025 ರಿಂದ ಅನ್ವಯಿಸುವಂತೆ ರದ್ದುಪಡಿಸಿರುತ್ತದೆ. |
| ಆ) | ಇದೇ ರೀತಿ ನಂದಿನಿ ಬ್ರ್ಯಾಂಡ್ ಉಪಯೋಗಿಸಿಕೊಂಡು ಯಾವ ಯಾವ ಪದಾರ್ಥಗಳನ್ನು ಕಲಬೆರಕೆ ಮಾಡಲಾಗುತ್ತಿದೆ? (ಮಾಹಿತಿ ನೀಡುವುದು) | ನಂದಿನಿ ಬ್ರ್ಯಾಂಡ್ ಅನ್ನು ಉಪಯೋಗಿಸಿಕೊಂಡು ಯಾವುದೇ ಪದಾರ್ಥಗಳನ್ನು ಕಲಬೆರಕೆ ಮಾಡಿರುವುದು ಕಂಡುಬಂದಿರುವುದಿಲ್ಲ.<br><br>ಅದಾಗ್ಯೂ ಕರ್ನಾಟಕ ಹಾಲು ಮಹಾಮಂಡಳದ ಜಾಗೃತದಳ, ಮಾರುಕಟ್ಟೆ ವಿಭಾಗ ಹಾಗೂ ಜಿಲ್ಲಾ ಹಾಲು ಒಕ್ಕೂಟಗಳ ವತಿಯಿಂದ ತಂಡವನ್ನು ರಚಿಸಿ, ಕಾಲಕಾಲಕ್ಕೆ |

| | | |
|---|---|---|
| | | ಮಾರುಕಟ್ಟೆಗೆ ಭೇಟಿ ನೀಡಿ ನಂದಿನಿ ಉತ್ಪನ್ನಗಳ ಸ್ಯಾಂಪಲ್‌ಗಳನ್ನು ಖರೀದಿಸಿ, ಗುಣಮಟ್ಟವನ್ನು ಪರಿಶೀಲಿಸಲು ಕರ್ನಾಟಕ ಹಾಲು ಮಹಾಮಂಡಳದ ಗುಣಭರವಸೆ ವಿಭಾಗಕ್ಕೆ ಕಳುಹಿಸಿ ಪರೀಕ್ಷೆಗೆ ಒಳಪಡಿಸಲು ಕ್ರಮವಿಡಲಾಗುತ್ತಿರುತ್ತದೆ. |

**ಸಂಖ್ಯೆ: ಸಿಒ 228 ಸಿಸಿಬಿ 2025**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ